ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಲೋಕಾಯುಕ್ತ ಪ್ರಕರಣಗಳ ವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ

**Spl. C(Corruption) 4/2020**

ಪ್ರಾಸಾಃ **5** ಚಾಸಾಃ **7**
ದಿನಾಂಕಃ **30-07-2024**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | ಃ- | ದೇವರಾಜ |
| ತಂದೆಯ ಹೆಸರು | ಃ- | ಮುತ್ತೇಗೌಡ |
| ವಯಸ್ಸು | ಃ- | 53 ವರ್ಷ |
| ಉದ್ಯೋಗ | ಃ- | ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬಂಗಾರಪೇಟೆ |
| ವಾಸ ಸ್ಥಳ | ಃ- | ಬೊಮ್ಮಗಾನಹಳ್ಳಿ |

ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ನಾನು 2014 ರಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದಾಗ, ಉಪ ನಿರ್ದೇಶಕರ ನಿಯೋಜನೆಯ ಆಧಾರದ ಮೇಲೆ ದಿನಾಂಕಃ 10-11-2014 ರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಕೆಜಿಎಫ್ -ನಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದೆ. ಕಳವಂಚಿ, ದೋಣಿಮಡಗು ಸಮೂಹಗಳ ಸರ್ಕಾರ ಶಿಕ್ಷಕರ ಸೇವಾ ವಹಿಗಳ ನಿರ್ವಹಣೆ, ವೇತನ ಬಿಲ್-ಗಳ ತಯಾರಿಕೆ, ನ್ಯಾಯಾಲಯದ ಕಡತ ನಿರ್ವಹಣೆ, ಮಾಹಿತಿ ಹಕ್ಕು ಅರ್ಜಿಗಳ ನಿರ್ವಹಣೆ ಹಾಗೂ ಅನುದಾನ ರಹಿತ ಶಾಲೆಗಳ ಶಾಖೆಯನ್ನು ಕಛೇರಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೆ.

ದಿನಾಂಕಃ 03-11-2018 ರಂದು ಕಛೇರಿಯಲ್ಲಿ ಮಧ್ಯಾಹ್ನ 02-00 ಗಂಟೆಯಲ್ಲಿ ಕೆಲಸ ಮಾಡುತ್ತಿದ್ದಾಗ ಎಸಿಬಿ ಸಿಬ್ಬಂದಿಯವರು ನಮ್ಮ ಕಛೇರಿ ಬಳಿ ಬಂದು, ದೇವರಾಜ್ ಯಾರು ಎಂದು ವಿಚಾರಿಸಿದರು, ನಾನೇ ಎಂದು ಹೇಳಿದೆ. ಅವರು ಎಸಿಬಿ ಇನ್ಸ್-ಪೆಕ್ಟರ್ ತಮ್ಮನ್ನು ಬಿಇಓ ಕೋಣೆಗೆ ಬರಲು ಹೇಳಿದ್ದಾರೆ ಬನ್ನಿ ಎಂದು ಕರೆದುಕೊಂಡು ಹೋದರು.

ನಾನು ಬಿಇಓ ರವರ ಕೋಣೆಗೆ ಹೋದಾಗ ಇನ್ಸ್‌ಪೆಕ್ಟರ್ ಪ್ರಕಾಶ್ ತಮ್ಮ ಪರಿಚಯ ಮಾಡಿಕೊಂಡರು. ಅವರ ಜೊತೆ ಶ್ಯಾಮಲಾದೇವಿ ಮತ್ತು ಶ್ರವಣ ಕುಮಾರ್ ರವರನ್ನು ಪರಿಚಯ ಮಾಡಿಕೊಟ್ಟರು. ಅಲ್ಲಿಯೇ ಇದ್ದ ಮಲ್ಲಿಕಾರ್ಜುನರೆಡ್ಡಿ ರವರನ್ನು ತೋರಿಸಿ ಇವರು ಅಕ್ಷರ ಇಂಟರ್ ನ್ಯಾಷನಲ್ ಶಾಲೆಯ ಮಾಲೀಕರಾಗಿದ್ದು 2018-2019 ನೇ ಸಾಲಿನ ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಿದ್ದು ಅದರ ಸಂಬಂಧ ಬಿಇಓ ಸುರೇಶ್ ರವರು ರೂ.10,000/- ಲಂಚ ಪಡೆದು, ಎಸಿಬಿ ದಾಳಿಯಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಹೇಳಿದರು. ಆರೋಪಿ ಕೆಜಿಎಫ್ ಬಿಇಓ ಆಗಿ ಕೆಲಸ ಮಾಡುತ್ತಿದ್ದರು. ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

ಇನ್ಸ್‌ಪೆಕ್ಟರ್ ರವರು ಕಡತದ ಬಗ್ಗೆ ಕೇಳಿದಾಗ, ಅದು ನನ್ನ ಬಳಿ ಇದೆ ಎಂದು ಹೇಳಿದೆ, ಅದನ್ನು ಹಾಜರು ಪಡಿಸಲು ಹೇಳಿದರು. ನಾನು ಹಾಜರು ಪಡಿಸಿದ್ದೇನೆ. ಸದರಿ ಕಡತದ ಬಗ್ಗೆ ವಿಚಾರಿಸಿದಾಗ, ವಿಷಯ ನಿರ್ವಾಹಕರಾಗಿದ್ದ ಮುನೀರ್ ಅಹಮದ್ ರವರು ನಿರ್ವಹಿಸುತ್ತಿದ್ದರು, ಅವರು ಬಿಇಓ ಕಛೇರಿ ಬಂಗಾರಪೇಟೆಗೆ ವರ್ಗಾವಣೆಯಾಗಿದ್ದು ಅವರ ಶಾಖೆಯನ್ನು ದಿನಾಂಕಃ 15-09-2018 ರಿಂದ ನನಗೆ ಹೆಚ್ಚುವರಿಯಾಗಿ ಕೊಟ್ಟಿದ್ದಾರೆ. ಆ ಬಗ್ಗೆ ಕಛೇರಿ ಟಿಪ್ಪಣಿಯನ್ನು ನಿಪಿ-16 ಎಂದು ಗುರುತಿಸಲಾಗಿದೆ. ಅದರಲ್ಲಿ ಖಂಡಿಕೆ-5 ರಿಂದ ನಾನು ಮುಂದುವರೆಸಿದ್ದೇನೆ. ಅದರಲ್ಲಿ ನನ್ನ ಕೈಬರವಣಿಗೆ ಕಂಡು ಬರುತ್ತದೆ. ದಿನಾಂಕಃ 09-10-2018 ರಂದು ಸದರಿ ಶಾಲೆಯ ಕಡತವನ್ನು ಮಾನ್ಯತೆಗಾಗಿ ವರದಿಯೊಂದಿಗೆ ಚಾಸಾ-8 ರವರ ಮುಂದೆ ಹಾಜರು ಪಡಿಸಿದ್ದೇನೆ. ದಿನಾಂಕಃ 10-10-2018 ರಂದು ಬಿಇಓ ರವರು ಪ್ರಸಕ್ತ ಸಾಲಿನ ಆಡಿಟ್ ವರದಿ ನೀಡುವಂತೆ ಆಕ್ಷೇಪಣೆ ವ್ಯಕ್ತ ಪಡಿಸಿ ಕಡತವನ್ನು ಹಿಂದಿರುಗಿಸಿದ್ದಾರೆ, ಈ ಮಾಹಿತಿಯನ್ನು ನಾನು ಆಡಳಿತ ಮಂಡಳಿಗೆ ಮೌಖಿಕವಾಗಿ ತಿಳಿಸಿದ್ದೇನೆ. ಆಡಳಿತ ಮಂಡಳಿಯವರು ದಿನಾಂಕಃ 29-10-2018 ರಂದು ಆಡಳಿತ ಮಂಡಳಿಯವರು ಆಡಿಟ್ ವರದಿ ಸಲ್ಲಿಸಿದ್ದು ತಿಮ್ಮರಾಯಪ್ಪ ಇಸಿರವರಿಂದ ಪರಿಶೀಲನಾ ವರದಿಯನ್ನು ನಿಗದಿತ ನಮೂನೆಯಲ್ಲಿ ಪಡೆದು ಮತ್ತೊಮ್ಮೆ ಆದೇಶಕ್ಕಾಗಿ ಕಡತ ಮಂಡಿಸಿರುತ್ತೇನೆ. ದಿನಾಂಕ 30-10-2018 ರಂದು ಬಿಇಓ ರವರು ಮಾನ್ಯತೆ ನವೀಕರಣದ ಬಗ್ಗೆ ಕ್ರಮಕ್ಕೆ ಸೂಚಿಸಿ ಹಿಂದಿರುಗಿಸಿದ್ದಾರೆ ಅದೇ ದಿನ ಕಡತ ಪಡೆದು ಮಾನ್ಯತೆ ನವೀಕರಣಕ್ಕಾಗಿ ನಮೂನೆ-2 ರ ಕರಡು ಪ್ರತಿ ಸಿದ್ಧ ಪಡಿಸಿದೆ. ಅದಕ್ಕೆ ನನ್ನ ಛೋಟಾ ಸಹಿ ಹಾಕಿದ್ದೇನೆ. ಅದನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ಆ ದಿನ ಕಛೇರಿ ಕೆಲಸ ಮುಗಿದ ಕಾರಣ, ಮಾರನೇ ದಿನ ರಜೆ ಇದ್ದಿದ್ದರಿಂದ, ದಿನಾಂಕಃ 02-11-2018 ರಂದು ಕರಡು ಪ್ರತಿಯೊಂದಿಗೆ 2018-2019 ರಿಂದ ಯಾವ ಅವಧಿಯವರೆಗೆ ನವೀಕರಣವಾಗಬೇಕು ಎನ್ನುವ ನಿರ್ದೇಶನಕ್ಕಾಗಿ ಕಡತವನ್ನು ಮಂಡಿಸಿದ್ದೇನೆ. ಅದೇ ದಿನ ಬಿಇಓರವರು 2019-2020 ವರೆಗೆ ಕ್ರಮ ವಹಿಸಬಹುದು ಎಂದು ಕಡತದಲ್ಲಿ ನಮೂದಿಸಿದ್ದಾರೆ ಕರಡು ಪ್ರತಿಯಲ್ಲಿ ಆ ಬಗ್ಗೆ ಕೈಬರಹದಿಂದ ಬರೆದಿರುತ್ತಾರೆ. ಕರಡು ಪ್ರತಿಯನ್ನು ಅನುಮೋದಿಸಿರುವುದಿಲ್ಲ. ನಾನು ಅನುಮೋದನೆಯಾಗಿಲ್ಲ ಎಂದು ಬಿಇಓರವರನ್ನು ಕೇಳಲಾಗಿ ಆಯ್ತು ನಾನು ಹೇಳುವವರಿಗೂ ಪುಟ್ ಅಪ್ ಮಾಡಬೇಡ ಶುದ್ಧ ಪ್ರತಿ ತಯಾರು ಮಾಡು ಎಂದು ಹೇಳಿದರು. ಕಡತ ನನ್ನ ವಶಕ್ಕೆ ಕೊಟ್ಟರು. ದಿನಾಂಕಃ 03-11-2018 ರಂದು ಶುದ್ಧ ಪ್ರತಿ ತಯಾರು ಮಾಡುವಷ್ಟರಲ್ಲಿ ಎಸಿಬಿ ರವರು ದಾಳಿ ಮಾಡಿದ್ದಾರೆ. ಸದರಿ ಕಡತದಲ್ಲಿ ಎಸಿಬಿ ಇನ್ಸ್‌ಪೆಕ್ಟರ್ ರವರು ಎಲ್ಲಾ 65 ಪುಟಗಳನ್ನು ಸಹಿ ಮಾಡಿ ಜೆರಾಕ್ಸ್ ಮಾಡಿ ಅವರಿಗೆ ನೀಡಲು ತಿಳಿಸಿರುತ್ತಾರೆ, ಅದರಂತೆ 65 ಪುಟಗಳನ್ನು ನೀಡುವಷ್ಟರಲ್ಲಿ ನಮ್ಮ ಉಪ ನಿರ್ದೇಶಕರು ರತ್ನಯ್ಯ ಎಂಬುವವರು ಕಛೇರಿಗೆ ಆಗಮಿಸಿದ್ದು ಅವರಿಂದ ದೃಢೀಕರಣ ಪಡೆದುಕೊಂಡು 65 ಪುಟಗಳನ್ನು ಎಸಿಬಿರವರು ವಶಕ್ಕೆ ಪಡೆದುಕೊಂಡರು. ಮೂಲಕ ಕಡತವನ್ನು ಮುಂದಿನ ಕ್ರಮಕ್ಕಾಗಿ ವಾಪಸ್ಸು ನೀಡಿದ್ದಾರೆ ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿದ್ದೇನೆ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂಹೆಚ್ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಗಿದೆ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

ಸಹಿ/-

(ಮಂಜುನಾಥ ಜಿ.ಎ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.